ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

8 ನೇ ಪ್ರತಿವಾದಿ ರವರು ಆರೋಗ್ಯವಾಗಿದ್ದು ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡಿತಿ 8 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಾನು ಸಹ ಹಾಜರಿದ್ದೇನು ಎಂದರೆ ಸಾಕ್ಷಿ ನಾನೇ ಖೀರಿದಿಸಿರುತ್ತೇನೆ ಎಂದು ನಡಿಯುತ್ತಾರೆ. ನಿಡಿ-4 ರ ಕ್ರಯ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಯಾವ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾರಾಟಗಾರರಿಗೆ ಆದ ಕ್ರಯ ಪತ್ರವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಮೂಲ ಮಾಲೀಕರು ಯಾರು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿರುತ್ತೇನೆ. ಅದು ನಾರಾಯಣಸ್ವಾಮಿ ಎನ್ನುವವರಿಗೆ ಸೇರಿತ್ತು ಎಂದು ತಿಳಿದು ಬಂದಿರುತ್ತದೆ. ದಾವಾ ಆಸ್ತಿಯನ್ನು ಖರೀದಿಸಲು ವಕೀಲರ ಬಳಿ ಯಾವುದೇ ಕಾನೂನು ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ. ದಾವೆಯಲ್ಲಿ 8 ನೇ ಪ್ರತಿವಾದಿ ಹಾಜರುಪಡಿಸಿರುವ ಲಿಖಿತ ಹೇಳಿಕೆ, ಸಾಕ್ಷಿ ಪ್ರಮಾಣ ಪತ್ರ ಮತ್ತು ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ಲಿಖಿತ ಹೇಳಿಕೆ ಮತ್ತು ಸಾಕ್ಷಿ ಪ್ರಮಾಣ ಪತ್ರವನ್ನು ನಮ್ಮ ವಕೀಲರು ಬರೆಸಿರುತ್ತಾರೆ. ನನಗೆ ಕನ್ನಡದಲ್ಲಿ ಓದಲು ಮತ್ತು

ಬರೆಯಲು ಬರುವುದಿಲ್ಲ ಆದರೆ ಮಾತನಾಡುತ್ತೇನೆ. ನನಗೆ ಇಂಗ್ಲೀಷ್ ಓದಲು ಬರುತ್ತದೆ. ನಿಡಿ-2 ರ ಕ್ರಯ ಪತ್ರದಲ್ಲಿ ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಯಾರು ಮಾರಾಟ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿರವರಿಗೆ ನಾರಾಯಣ ಸ್ವಾಮಿ ಎನ್ನುವವರು ಮಾರಾಟ ಮಾಡಿರುತ್ತಾರೆ. ನಾರಾಯಣ ಸ್ವಾಮಿಯವರು ಸರ್ಕಾರಕ್ಕೆ ಹಣವನ್ನು ಕಟ್ಟಿ ದಾವಾ ಆಸ್ತಿಯನ್ನು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಸದರಿ ನಾರಾಯಣ ಸ್ವಾಮಿರವರು ದಾವಾ ಆಸ್ತಿಯನ್ನು ಸರ್ಕಾರದಿಂದ ಮಾಡಿಸಿಕೊಂಡ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಆ ದಾಖಲೆ ನನ್ನ ಬಳಿ ಇರುತ್ತದೆ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯನ್ನು ಸಲ್ಲಿಸಿರುವ ವಾದಿಗಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅವರು ಯಾರು ಎಂದು ತಿಳಿದುಕೊಳ್ಳಲು ಪಯತ್ನಪಟ್ಟಿರುವುದಿಲ್ಲ. ವಾದಿಗಳು ದಾವಾ ಆಸ್ತಿಯು ಪಿತ್ರಾರ್ಜಿತ ಸ್ವತ್ತು ಆಗಿದ್ದು ಅವರಿಗೂ ಸಹ ಭಾಗ ಇರುತ್ತದೆ ಎಂದು ದಾವೆ ಮಾಡಿರುತ್ತಾರೆ. ವಾದಿಗಳು ದಾವೆ ಸಲ್ಲಿಸಿದ ನಂತರ 7 ನೇ ಪ್ರತಿವಾದಿಯನ್ನು ಭೇಟಿ ಮಾಡಿ ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿಯು ಅವರನ್ನು ಭೇಟಿ ಮಾಡಿರುತ್ತೇನೆ ಆದರೆ 7 ನೇ ಪ್ರತಿವಾದಿರವರು ದಾಖಲೆಗಳನ್ನು ನಿಮಗೆ ನೀಡಿರುತ್ತೇನೆ ನೀವೇ ಬಗೆಹರಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಮೂಲಕ ಮಾಲೀಕರ ವಂಶವೃಕ್ಷವನ್ನು ನಾನು ನೋಡಿರುತ್ತೇನೆ. ಅದನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ 7 ನೇ ಪ್ರತಿವಾದಿಯು ದಾವಾ ಆಸ್ತಿಯ ಖರೀದಿಸುವ ಸಮಯದಲ್ಲಿ ವಾದಿಗಳು ಅಪ್ರಾಪ್ತ ವಯಸ್ಕರಾಗಿರುತ್ತಾರೆ ಎಂದು ತಿಳಿಸಿದ್ದು ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 7 ನೇ ಪ್ರತಿವಾದಿರವರು ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ವಾದಿ 5 ಮತ್ತು 6 ರವರಿಗೆ 40 ವರ್ಷ ಮೇಲ್ಪಟ್ಟಾಗಿತ್ತು ಎಂದರೆ ಅದರ ಬಗ್ಗೆ ನಾನು ಏನೂ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಗಳು ಮತ್ತು 1 ರಿಂದ 6 ನೇ ಪ್ರತಿವಾದಿಗಳು ಪರಿಶಿಷ್ಟ ಜಾತಿಗೆ ಸೇರಿದರಾಗಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ವಾದಿಗಳು ಮತ್ತು 1 ರಿಂದ 6 ನೇ ಪ್ರತಿವಾದಿ ಅನಕ್ಷರಸ್ಥರಾಗಿದ್ದು ಅವರಿಗೆ ಸಹಿ ಕೂಡ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ವಾದಿ ಗಳು ಮತ್ತು 1 ರಿಂದ 6 ನೇ ಪ್ರತಿವಾದಿಗಳ ತಾತನಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ಷರತ್ತುಗೂಳಪಟ್ಟು ಸರ್ಕಾರದಿಂದ ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರ ಮಾರಾಟ ಮಾಡುವ ಸಮಯದಲ್ಲಿ ಮಾರಾಟಕ್ಕೆ ಸಂಬಂಧಿಸಿದ ಷರತ್ತು ಪೂರ್ಣಗೊಂಡಿತ್ತು ಎಂದು ನುಡಿಯುತ್ತಾರೆ.

ದಾವಾ ಆಸ್ತಿಯನ್ನು 1, 4 ಮತ್ತು 6 ನೇ ಪ್ರತಿವಾದಿಗಳು ಅವರ ಗಂಡಂದಿರು ತೀರಿಕೊಂಡನಂತರ ಪೌತಿ ಖಾತೆ ಮಾಡಿಸಿಕೊಂಡು 7 ನೇ

ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1, 4 ಮತ್ತು 6ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 7ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ವಾದಿಗಳ ವಯಸ್ಸು 20 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿ ಕ್ರಯ ಪತ್ರವಾಗುವ ಸಮಯದಲ್ಲಿ 1 ರಿಂದ 6ನೇ ಪ್ರತಿವಾದಿಗಳು 1 ರಿಂದ 6ನೇ ವಾದಿಗಳ ಒಪ್ಪಿಗೆ ಪಡೆದುಕೊಂಡಿರುವುದಿಲ್ಲ ಎಂದರೆ ಒಪ್ಪಿಗೆ ಪಡೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ನಿಡಿ-2 ಮತ್ತು ನಿಡಿ-4ರ ಕ್ರಯ ಪತ್ರಗಳಲ್ಲಿ ವಾದಿಗಳ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 5ರಲ್ಲಿ ಹೇಳಿರುವಂತೆ 7ನೇ ಪ್ರತಿವಾದಿರವರು ಖರೀದಿಸುವ ಸಮಯದಲ್ಲಿ 1 ರಿಂದ 6ನೇ ಪ್ರತಿವಾದಿ ಗಳ ಜೊತೆ ಮಾತುಕತೆನಡೆಸಿದ್ದಾರೆ ಎಂದು ತಿಳಿಸಿದುಸಿ, ಈ ಬಗ್ಗೆ ನನಗೆ 7ನೇ ಪ್ರತಿವಾದಿರವರೇ ತಿಳಿಸಿರುತ್ತಾರೆ

ವಾದಿಗಳಿಗೆ 7ನೇ ಪ್ರತಿವಾದಿರವರಿಂದ ಯಾವುದೇ ಕ್ರಯದ ಮೊಬಲಗು ತಲುಪಿರುವುದಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರಿದಿಸುವ ಪೂರ್ವದಲ್ಲಿ 7ನೇ ಪ್ರತಿವಾದಿಯಾಗಲೀ ನಾನಾಗಲೀ ಸಾರ್ವಜನಿಕ ಪ್ರಕರಣೆ ನೀಡಿರುವುದಿಲ್ಲ ಎಂದರೆ ಸರಿ. 7ನೇ ಪ್ರತಿವಾದಿಯಾಗಲೀ ಅಥವಾ ನೀವುವಾಗಲೀ ದಾವಾ ಆಸ್ತಿಯ ಮೂಲ ದಾಖಲೆಗಳ ನೈಜ್ಯತೆಯನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ 7ನೇ ಪ್ರತಿವಾದಿ

ಕಡೆಯಿಂದ ಖರೀದಿಸುವ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ ಆದರೆ 7ನೇ ಪ್ರತಿವಾದಿ ದಾವಾ ಆಸ್ತಿಗಳ ಬಗ್ಗೆ ನೈಜ್ಯತೆ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ. ಆ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿರುವುದಿಲ್ಲ ಎಂದರೆ ಸರಿ.

ವಾದಿ ಮತ್ತು 1 ರಿಂದ 6ನೇ ಪ್ರತಿವಾದಿ ರವರು 2015 ರವರಗೆ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲಿ ವಾದಿಗಳು ಉಳಿಮೆ ಮಾಡುತ್ತಿದ್ದ ಬಗ್ಗೆ ನಾನೇ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸಾಕ್ಷಿ ನಾವು ವ್ಯವಸಾಯ ಮಾಡಿದ ಬೆಳೆಯನ್ನು ವಾದಿಗಳು ಕಟಾವು ಮಾಡಿದ್ದರಿಂದ ನಾನು ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರು ವಾದಿಗಳಿಗೆ ಮತ್ತು ನನಗೆ ದಾವಾ ಆಸ್ತಿ ಬಳಿ ಹೋಗಬಾರದು ಎಂದು ತಿಳಿಸಿದ್ದರು ಎಂದರೆ ಸಾಕ್ಷಿಯು ಪೊಲೀಸರು ವಾದಿಗಳಿಗೆ ಮಾತ್ರ ನಮಗೆ ತೊಂದರೆ ಕೊಡದಂತೆ ಮುಚ್ಚಳಿಕೆ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ವಾದಿಗಳಿಗೆ ರಾಜಿ ಪಂಚಾಯಿತಿ ಮಾಡಿ ಬಗೆಹರಿಸಿಕೊಳ್ಳೋಣ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಲ. ವಾದಿಗಳು 7ನೇ ಪ್ರತಿವಾದಿ ಮತ್ತು 8ನೇ ಪ್ರತಿವಾದಿಗಾಗಲೀ ಆದ ಕ್ರಯ ಪತ್ರಗಳಿಗೆ ಸಹಿ ಮಾಡಿಲ್ಲದೇ ಇರುವ ಕಾರಣ ಅದು ಅವರಿಗೆ ಬಾದಕವಾಗುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಗಳು ಮತ್ತು 1 ರಿಂದ 6ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತಾ ಎಂದರೆ ಸಾಕ್ಷಿ ಅದರ ಬಗ್ಗೆ

ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.